ದಿನಗಳಲ್ಲಿ ಯಾರು ಯಾರನ್ನೋ ಕರೆತರುತ್ತಿದ್ದ. ಮತ್ತು ಅವರೊಂದಿಗೆ ರಾತ್ರಿ ಹಗಲುಗಳ ಭೇದವಿಲ್ಲದೆ ಅವನ ಲೀಲೆ ನಡೆಯುತ್ತಿತ್ತು. ಅಷ್ಟೇ ಅಲ್ಲ ತಂದೆ ತಾಯಂದಿರು ಬಾಣಂತಿ ಮತ್ತು ಮಗುವಿನ ಆರೋಗ್ಯಕ್ಕೆಂದು ತಂದು ಕೊಡುತ್ತಿದ್ದ ಹಣ್ಣು ಹಂಪಲು ಮತ್ತು ಪೌಷ್ಟಿಕಾಂಶದ ಆಹಾರಗಳೆಲ್ಲವೂ ರಾತ್ರಿ ಬೆಳಗಾಗುವುದರೊಳಗೆ ಮಾಯವಾಗುತ್ತಿದ್ದುವು. ಬೇಸತ್ತ ರಾಗಿಣಿ ಮಗುವಿಗೆ ಆರು ತಿಂಗಳಾಗುವಾಗ ತವರಿಗೆ ಮರಳಿದ್ದಳು. ಅಳಿಯನ ಬೇಡಿಕೆಗಳಿಗೆ ಮಣಿದು

